# 42nd Scientific advisory committee

The 42nd Scientific advisory committee (SAC) meeting was held on 15th of June 2018 at ICAR- Krishi Vigyan Kendra, Hanumanamatti. The meeting was chaired by Hon'ble Vice-chancellor, Dr. V. I Benagi. Dr. Ashoka P, Senior Scientist and Head, has welcomed the all members of the committee and presented the progress report of year 2017-18 and proposed the action plan for the year 2018-19 during his formal speech. During this meeting discussion has been made on various aspects of the agriculture and allied sector with the district level officers of agriculture and line dept of Haveri district. Further, Dr. B.T Rayadu, Principal Scientist, ATARI Bengaluru, Dr. R R Patil, Director of Extention, UAS Dharwad, Dr. B. B. Channappagoudar, Associate director of Extention, UAS Dharwad , Dr Ravikumar M.R, Professor, College of agriculture Hanumanamatti and progressive farmers of the district were also participated in the meeting and suggested the valuable information to the all members and KVK scientist to prepare the good action plan of the KVK for the year 2018-19. After the completion of the meeting Hon'ble Vice–chancellor, Dr. V.I. Benagi and other officers of University and line department have also participated in the Celebration of World Environment Day by planting of trees at in front of the KVK building. The programme was anchored by Dr. K.P Gundannavar. In this meeting all scientist and staff of KVK, line department officials, farmers and farm women's were also participated.

# 42 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ

ದಿನಾಂಕ : 15.06.2018 ರಂದು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ 42 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯು ಡಾ. ವಿ.ಐ. ಬೆಣಗಿ, ಗೌರವಾನ್ವಿತ ಕುಲಪತಿಗಳು ಕೃಷಿ ವಿಶ್ವವಿದ್ಯಾಲಯ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಗೆ ಹಾಜರಾದ ಸಮಿತಿಯ ಎಲ್ಲ ಸದಸ್ಯರಿಗೆ ಡಾ. ಅಶೋಕ ಪಿ, ಹಿರಯ ವಿಜ್ಞಾನಿ ಮತ್ತು ಮುಖ್ಯಸರು ರವರು ಸ್ವಾಗತಿಸಿ, 2017–18 ನೇ ಸಾಲಿನಲ್ಲಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಅನುಷ್ಠಾನಗೊಂಡ ಪ್ರಗತಿ ವರದಿ ಹಾಗೂ 2018–19 ರ ಕ್ರಿಯಾ ಯೋಜನೆಯನ್ನು ಮಂಡಿಸಿದರು. ಈ ಸಭೆಯಲ್ಲಿ ಡಾ. ಬಿ.ಟಿ ರಾಯಡು, ಪ್ರದಾನ ವಿಜ್ಞಾನಿಗಳು, ಅಟಾರಿ, ಬೆಂಗಳೂರು, ಡಾ. ಆರ್.ಆರ್ ಪಾಟೀಲ್, ವಿಸ್ತರಣಾ ನಿರ್ದೇಶಕರು, ಡಾ. ಬಿ.ಬಿ. ಚನ್ನಪ್ಪಗೌಡರ, ಸಹ ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ ಧಾರವಾಡ ಮತ್ತು ಡಾ. ರವಿಕಮಾರ ಎಮ್.ಆರ್, ಪ್ರಾಧ್ಯಾಪಕರು, ಕೃಷಿ ಮಹಾವಿದ್ಯಾಲಯ ಹನುಮನಮಟ್ಟಿ ರವರು ಈ ಸಭೆಗೆ ಹಾಜರಾಗಿ ಕೃಷಿ ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡಿದರು, ಹಾಗೂ 2018–19 ರ ಕ್ರಿಯಾ ಯೋಜನೆಯನ್ನು ತಯಾರಿಸಲು ತಾಂತ್ರಿಕ ಸಲಹೆ ನೀಡಿದರು. ಸಭೆ ಮುಗಿದ ನಂತರ ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು, ವಿವಿಧ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಹಾಗೂ ಪ್ರಗತಿಪರ ರೈತರೊಂದಿಗೆ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಕೃಷಿ ವಿಜ್ಞಾನ ಕೇಂದ್ರದ ಕಛೇರಿ ಮುಂದೆ ಗಿಡಗಳನ್ನು ನಾಟಿ ಮಾಡುವುದರ ಮೂಲಕ ಆಚರಣೆ ಮಾಡಲಾಯಿತು. ಈ ಸಭೆಯ ನಿರೂಪಣೆಯನ್ನು ಡಾ. ಕೆ.ಪಿ. ಗುಂಡಣ್ಣವರ ರವರು ನೆರವೇರಿಸಿದರು. ಸದರಿ ಸಭೆಗೆ ಕೃಷಿ ವಿಜ್ಞಾನ ಕೇಂದ್ರದ ಎಲ್ಲ ವಿಜ್ಞಾನಿಗಳು ಮತ್ತು ಸಿಬ್ಬಂದಿಗಳು, ರೈತ ಮತ್ತು ರೈತಮಹಿಳೆಯರು ಪಾಲ್ಗೊಂಡಿದ್ದರು.


ವೈಜ್ಞಾನಿಕ ಸಲಹಾ ಸಮಿತಿ ಸಭೆ

